Mr. SPEAKER.— Questions is too General. He may ask a question bearing on this particular point.

Sri K. P. GADAG.—There is no traffic communication between. these two taluks except this one therefore, I am asking whether there is such a scheme. ನರಗುಂದ ಮತ್ತು ರೋಣ--ಈ ಎರೆಡು ತಾಲೋಕುಗಳ ನಡುವೆ ಈ ರಸ್ತೆ ಬಿಟ್ಟು ಇನೊಂದು ರಸ್ತೆ ಸೌಕರ್ಯವಿಲ್ಲವೆನ್ನುವದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಎಚ್. ಕೆ. ವೀರಣ್ಣಗೌಡ.—ಈಗ ಮಾನ್ಯ ಸದಸ್ಯರು ಕೇಳುತ್ತಿರುವ ಪ್ರಶ್ನೆಯಿಂದ ನಾವು ಆ ರೀತಿ ಊಹೆ ಮಾಡಿಕೊಳ್ಳಬೇಕಾಗುತ್ತದೆ.

CONSTRUCTION OF CULVERTS ACROSS HOSAHALLI AND JIGALUR ON THE SUDI–RON ROAD IN DHARWAR DISTRICT.

* *Q.*—212. Sri A. J. DODDAMETI (Ron).—

Will the Government be pleased to state.—

the steps taken by them to construct culverts across Hosahally and Jigalur hallas on the Sudi–Ron road and other minor hallas across Sudi *via* Mushigeri and Belur Road in Dharwar District?

A.—Sri H. K. VEERANNA GOWDH (Minister for Public Works and Electricity).—

The construction of culverts across the Hosahally and Jigalur hallas on Sudi–Ron Road is being considered under a phased programme of improvements depending on the availability of funds and priorities.

The cross-drainage works on other minor hallas across Sudi–Belur road *via* Itagi and Mushigeri will be considered after the completion of the formation of this road.

ಶ್ರೀ ಎ. ಜೆ. ದೊಡ್ಡಮೇಟಿ.—ಮಾನ್ಯ ಚನ್ನಬಸಪ್ಪನವರು ಮರಾಮತ್ತು ಇಲಾಖೆಯ ಸಚಿವರಾಗಿದ್ದಾಗ, ಧಾರವಾಡ ಜಿಲ್ಲೆಯಲ್ಲಿ ಪ್ರವಾಸ ಬಂದಿದ್ದಾಗ ಈ ಜಗಳೂರು ಹಳ್ಳದ ಮತ್ತು ಇತರ ಹಳ್ಳಗಳ ಕಡೆ ಇರುವ ಅಡಿಗಾಲುವೆಗಳನ್ನು ಮಾಡಿಸಿಕೊಡುತ್ತೇವೆಂದು ಆಶ್ವಾಸನೆ ಕೊಟ್ಟಿರುವುದು ರಿಕಾರ್ಡಿನಲ್ಲಿ ಬಂದಿದೆಯೇ?

†ಶ್ರೀ ಎಚ್. ಕೆ. ವೀರಣ್ಣಗೌಡ.—ಅದು ನುಳ್ಳು ಎಂದು ಹೇಳುವುದಕ್ಕಾಗುವುದಿಲ್ಲ. ತಾವೇ ಹೇಳಿಕೆ ಕೊಡುತ್ತಿರುವುದರಿಂದ ನಿಜವಿರಬಹುದು.

(ನಗು)

Sri H. M. CHANNABASAPPA.—The matter will be examined with reference to tour notes that will be available in the P.W.D. Minister's Office.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಮಂತ್ರಿಗಳು ಟೂರು ಹೋದಾಗ ಅಲ್ಲಿ ಆಶ್ವಾಸನೆಗಳನ್ನು ಕೊಟ್ಟುಬರುತ್ತಾರೆ. ಅಂಥಹವುಗಳೆಲ್ಲಾ ರಿಕಾರ್ಡಿನಲ್ಲಿ ಬರುತ್ತದೆಯೇ ಹೇಗೆ?

Mr. SPEAKER.—This is a general question.